

# ರೋಜರ್ ಫೆಡರರ್

## ಆಟದ ಪುನರುತ್ಥಾನದ ಪೀಠದ ಮೇಲೆ

**ಟೆ**ನಿಸ್ ಆಟಗಾರನೊಬ್ಬನಿಗೆ ಸಂಕ್ರಮಣ ಎನ್ನಬಹುದಾದ ವಯಸ್ಸು ಎಷ್ಟು – ಇಂಥ ಪ್ರಶ್ನೆಯನ್ನು ರೋಜರ್ ಫೆಡರರ್ ಅವರನ್ನು ಪತ್ರಕರ್ತರೊಬ್ಬರು ಕೇಳಿದಾಗ, ಅವರು ಮರುಪ್ರಶ್ನೆ ಹಾಕಿದ್ದರು: 'ದಿಗ್ಗಜ ಆಟಗಾರರ ಕೊನೆಯ ಗ್ರ್ಯಾಂಡ್ ಸ್ಲ್ಯಾಮ್ ಗೆದ್ದಾಗ ಅವರಿಗೆ ವಯಸ್ಸು ಎಷ್ಟಾಗಿತ್ತೆಂಬ ಪಟ್ಟಿ ಇದೆಯೇ?'. ಸಾಕಷ್ಟು ಸಿದ್ಧತೆ ಮಾಡಿಕೊಂಡು ಬಂದಿದ್ದ ಪತ್ರಕರ್ತ ಅವರಾಗಿದ್ದರಿಂದ ಪಟ್ಟಿ ಕೊಟ್ಟರು: ಆ್ಯಂಡ್ರೆ ಅಗಾಸ್ಸಿ ಕೊನೆಯ ಬಾರಿಗೆ ಪ್ರಮುಖ ಪ್ರಶಸ್ತಿ ಗೆದ್ದದ್ದು ಮೂವತ್ತೆರಡಾಗಿದ್ದಾಗ. ರಾಡ್ ಲವೆರ್ ಪೀಟ್ ಸಾಂಪ್ರಾಸ್ ಅಂಥದ್ದೇ ಸಾಧನೆ ಮಾಡಿದ್ದಾಗ ಇಬ್ಬರಿಗೂ ಮೂವತ್ತೊಂದು. ಜಾನ್ ಮೆಕೆನ್ರೋ, ಬೋರ್ನ್ ಬೋರ್ಗ್ ಕೊನೆಯ ದೊಡ್ಡ ಪ್ರಶಸ್ತಿಯ ಸಂಭ್ರಮದಲ್ಲಿ ಮಿಂದೆದ್ದದ್ದು ಇಪ್ಪತ್ತೈದರ ಹರೆಯದಲ್ಲಿ!

ಈ ಪಟ್ಟಿಯನ್ನು ಕೇಳಿದ ಮೇಲೆ ಫೆಡರರ್ ತಮ್ಮ ಮೂಗನ್ನೊಮ್ಮೆ ತಿಕ್ಕಿಕೊಂಡರು. ಅದು ಎಂದಿನಂತೆ ಕೆಂಪಾಯಿತು. ಕ್ರಮೇಣ ಆ ಕೆಂಪು ಮುಖದ ತುಂಬೆಲ್ಲ ಅಡರಿತು. ಯಾಕೆಂದರೆ, ಹೋದವರ್ಷ ಜುಲೈನಲ್ಲಿ ಫೆಡರರ್ ವಿಂಬಲ್ಡನ್ ಗೆದ್ದಾಗ ಆ ಪ್ರಶಸ್ತಿ ಎತ್ತಿಹಿಡಿದ ಅತಿ ಹಿರಿಯ ಆಟಗಾರ ಎಂಬ ಗೌರವ ಅವರದ್ದಾಗಿತ್ತು. 1968ರಲ್ಲಿ ವಿಂಬಲ್ಡನ್ ಶುರುವಾದಾಗಿನಿಂದ ಅಂಥದೊಂದು ದಾಖಲೆಯನ್ನು ಯಾರೂ ಬರೆದಿರಲಿಲ್ಲ. 1972ರಲ್ಲಿ ಕೆನ್ ರೂಸ್‌ವಾಲ್ ಆಸ್ಟ್ರೇಲಿಯಾ ಓಪನ್‌ನಲ್ಲಿ ಗೆದ್ದಾಗ ಅವರಿಗೆ ಎಷ್ಟು ವಯಸ್ಸಾಗಿತ್ತೋ ಅದಕ್ಕಿಂತ ಫೆಡರರ್ ತುಸು ಚಿಕ್ಕವರಷ್ಟೇ. ಮೂವತ್ತೆರಡರಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದ ಆಂಡ್ರೆ ಅಗಾಸ್ಸಿ ಮೂವತ್ತಾರರ ಫೆಡರರ್ ಮೂಗು ಕೆಂಪಗಾಗುವುದನ್ನು ನೋಡಿ ಪುಳಕಗೊಂಡಿರಲಿಕ್ಕೂ ಸಾಕು.

ಟೆನಿಸ್ ಧ್ಯಾನಸ್ಥನ ಪುನರುತ್ಥಾನದ ವರ್ಷ 2017. ಯಾಕೆಂದರೆ, 2016ರಲ್ಲಿ ಆರು ತಿಂಗಳು ಅವರು ಆಟವಾಡಲು ಆಗಿರಲಿಲ್ಲ. ಮೊಣಕಾಲು ಊತ ಅವರನ್ನು ಹಿಂಡಿ ಹಿಪ್ಪೆಕಾಯಿ ಮಾಡಿತ್ತು. ಒಂದೇ ಒಂದು 'ಟ್ಯೂನಪ್ ಟೂರ್ನಿ' ಆಡಿಕೊಂಡು ಸೀದಾ ಜನವರಿಯಲ್ಲಿ 'ಆಸ್ಟ್ರೇಲಿಯಾ ಓಪನ್' ಕಣಕ್ಕೆ ಇಳಿದರು. ಫೈನಲ್ ಪ್ರವೇಶಿಸಿದ ಅವರಿಗೆ ಅಲ್ಲಿ ಎದುರಾಳಿ ರಫೆಲ್ ನಡಾಲ್ ಎಂದು ಗೊತ್ತಾಯಿತು. ಸಾಂಪ್ರಾಸ್ ಶಕೆಗೊಂದು ಪೂರ್ಣವಿರಾಮದ ಮೊಳೆ ಹೊಡೆದವರಲ್ಲಿ ಫೆಡರರ್ ಕೂಡ ಒಬ್ಬರು. ಅಂಥದ್ದೇ ಮೊಳೆಯನ್ನು ಫೆಡರರ್ ಆಟಕ್ಕೆ ತಾನೂ ಹೊಡೆದೇನು ಎನ್ನುವಂತೆ ಉಬ್ಬಿದ ತೋಳುಗಳನ್ನು ತೋರಿದ್ದ ಹುಡುಗ ನಡಾಲ್. ಫೆಡರರ್‌ಗಿಂತ ಐದು ವರ್ಷ ಚಿಕ್ಕ ಪ್ರಾಯದ ಅವರಿಗೆ ಸಹಜವಾಗಿಯೇ ಆತ್ಮವಿಶ್ವಾಸ ಹೆಚ್ಚೇ ಇರಲಿಕ್ಕೆ ಸಾಕು. ಆದರೆ, ಮೊಣಕಾಲು ನೋವನ್ನು ಸ್ವಿಟ್ಜರ್ಲೆಂಡಿನಿಂದ ಆಚೆ ಬಿಟ್ಟುಬಂದಂತೆ ಆಡಿದ ಫೆಡರರ್ ಮತ್ತೆ ಪ್ರಶಸ್ತಿ ಗೆದ್ದರು; ಮೊಳೆ ಹೊಡೆಯಲು ಇನ್ನೂ ತಾನಿದ್ದೇನೆ ಎನ್ನುವಂತೆ ನೋಡುತ್ತಿದ್ದ ನಡಾಲ್ ವಿರುದ್ಧ. ಕ್ಯಾಲಿಫೋರ್ನಿಯಾದ ಇಂಡಿಯನ್ ವೇಲ್ಸ್‌ನಲ್ಲಿ, ಮಿಯಾಮಿಯಲ್ಲಿ ಹಿಂದಿನ ವರ್ಷ ಆಡಿದ್ದ ಲಯದಲ್ಲಿಯೇ ಆಡಿ ಭುಜಬಲ ಪರಾಕ್ರಮಿ ನಡಾಲ್ ಮುಟ್ಟಿ ನೋಡಿಕೊಳ್ಳುವಂತೆ ಮಾಡಿದರು.

ಫೆಡರರ್ ಪುನರುತ್ಥಾನದ ಸಂದರ್ಭದಲ್ಲೇ ಉಸೇನ್ ಬೋಲ್ಟ್ ವಿಶ್ವ ಟ್ರ್ಯಾಕ್ ಅಂಡ್ ಫೀಲ್ಡ್ ಸ್ಪರ್ಧೆಯ 100 ಮೀಟರ್ ಓಟದಲ್ಲಿ ದಣಿದಂತೆ ಓಡಿ, ಮೂರನೆಯವರಾದದ್ದು. ಹಾಗೆ ನೋಡಿದರೆ, ಅವರಿಗಿಂತ ಫೆಡರರ್ ವಯಸ್ಸಿನಲ್ಲಿ ಅರ್ಧ ದಶಕದಷ್ಟು ದೊಡ್ಡವರು. ಕ್ರೀಡೆಯಲ್ಲಿ ಅರ್ಧ ದಶಕ ಎನ್ನುವುದು ದೊಡ್ಡ ಅಂತರವೇ ಹೌದು.

### ಕಿಚ್ಚು... ಕಣ್ಣೀರು...

ಚಿಕ್ಕಂದಿನಲ್ಲಿ ತರಬೇತುದಾರ ಸರಿಯಾಗೇ ಚುಚ್ಚಿದ್ದರು: 'ನಿನ್ನ ಕೈಗಳನ್ನು